**ಶ್ರೀಮತಿ ಶಾರದಾ ಪೂರ್ಯನಾಯಕ್** : ಅಧ್ಯಕ್ಷರೆ, DWSM Committee ದು Scrutiny ಆಗಬೇಕಾಗಿತ್ತು. Scrutiny ಆಗದೆ ಇಲ್ಲಿ ಆಗುತ್ತಿರುವುದು ಅದು ತಪ್ಪಲ್ಲ.

**ಅಧ್ಯಕ್ಷರು** : ಆಗುತ್ತದೆ ಎಂದು ಹೇಳಿದ್ದಾರಲ್ಲ.

**ಶ್ರೀಮತಿ ಶಾರದಾ ಪೂರ್ಯ ನಾಯಕ್** : ಅವರು ಹೇಳುತ್ತಿರುವುದು ಸರಳೀಕರಣಗೊಳಿಸುತ್ತಿರುವ ಬಗ್ಗೆ. ಆದರೆ DWSM ಕಮಿಟಿಗೆ ಏನು ಬೆಲೆ ಬಂತು ?

**ಅಧ್ಯಕ್ಷರು** : ಶಾಸಕರ ಅಧ್ಯಕ್ಷತೆಯಲ್ಲಿ ಮಾಡುತ್ತೇನೆಂದು ಹೇಳಿದ್ದಾರಲ್ಲ. ಶ್ರೀ ಕೃಷ್ಣಾ ರೆಡ್ಡಿ –ಇಲ್ಲ.

17. ವಿಷಯ : **ಮಾಜಿ ದೇವದಾಸಿಯರಿಗೆ ಮಂಜೂರು ಮಾಡಿ ಬಿಡುಗಡೆ ಮಾಡಿದ ಮಾಶಾಸನವನ್ನು ಕಳೆದ 9 ತಿಂಗಳಿಂದ ನೀಡದಿದ್ದರಿಂದ ಬಡ ಮಹಿಳೆಯರಿಗೆ ತೊಂದರೆಯುಂಟಾಗಿರುವ ಬಗ್ಗೆ.**

**ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ್)** : ಮಾಜಿ ದೇವದಾಸಿಯರಿಗೆ ಮಂಜೂರು ಮಾಡಿ ಬಿಡುಗಡೆ ಮಾಡಿದ ಮಾಶಾಸನವನ್ನು ಕಳೆದ 9 ತಿಂಗಳಿಂದ ನೀಡದಿದ್ದರಿಂದ ಬಡ ಮಹಿಳೆಯರಿಗೆ ತೊಂದರೆಯುಂಟಾಗಿರುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಗಮನ ಸೆಳೆದಿದ್ದೆ. ಅವರು 2013–14ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡ ಕಾರಣ 4ನೇ ಕಂತಿನ ನೀಡಬೇಕಾದ ಅನುದಾನವನ್ನು 2014–15ನೇ ಸಾಲಿನಲ್ಲಿ ಒದಗಿಸಿ ಮಾಶಾಸನ ಪಾವತಿಸಲಾಗುವುದು ಎಂದು ಹೇಳಿದ್ದಾರೆ. ಅದು ಇದುವರೆಗೂ ಬಂದಿಲ್ಲ.

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರು)** : ಮಾನ್ಯ ಅಧ್ಯಕ್ಷರೆ, ಸರ್ಕಾರವು ದೇವದಾಸಿ (ಸಮರ್ಪಣಾ ನಿಷೇಧ) ಕಾಯ್ದೆ 1982 ಮತ್ತು ಈ ಕಾಯ್ದೆಯನ್ವಯ ರಚಿಸಲ್ಪಟ್ಟಿರುವ ನಿಯಮಗಳ ಪ್ರಕಾರ ದೇವದಾಸಿ ಸಮರ್ಪಣಾ ಪದ್ಧತಿಯನ್ನು ನಿಷೇದಿಸಿದೆ. 1993–94ನೇ ಸಾಲಿನಲ್ಲಿ ದೇವದಾಸಿಯರ ಬಗ್ಗೆ ನಡೆಸಲಾದ ಸಮೀಕ್ಷೆಯಲ್ಲಿ 22873 ಮಾಜಿ ದೇವದಾಸಿಯರನ್ನು ಗುರುತಿಸಲಾಗಿದೆ. ರಾಜ್ಯದ ಇನ್ನು ಕೆಲವು ಜಿಲ್ಲೆಗಳಲ್ಲಿ ಮಾಜಿ ದೇವದಾಸಿಯರು ಇರುವುದು ಸರ್ಕಾರದ ಗಮನಕ್ಕೆ ಬಂದುದ್ದರಿಂದ 2007–08ನೇ ಸಾಲಿನಲ್ಲಿ ಈ ಬಗ್ಗೆ ಮತ್ತೊಮ್ಮೆ ಸಮೀಕ್ಷೆಯನ್ನು ಮಾಡಲಾಗಿದೆ. ಈ ಸಮಿಕ್ಷೆಯಲ್ಲಿ 23787 ಮಾಜಿ ದೇವದಾಸಿಯರು ಇರುವುದನ್ನು ಗುರುತಿಸಲಾಗಿದೆ. 1993–94ನೇ ಸಾಲಿನಲ್ಲಿ ಗುರುತಿಸಲಾದ 22873 ಮತ್ತು 2007–08ನೇ ಸಾಲಿನಲ್ಲಿ ಗುರುತಿಸಲಾದ 23787 ಹೀಗೆ ಒಟ್ಟು 46660 ಮಾಜಿ ದೇವದಾಸಿಯರಲ್ಲಿ 45 ವರ್ಷ ಮೀರಿದ ಮಾಜಿ ದೇವದಾಸಿಯರಿಗೆ ಮಾಶಾಸನವನ್ನು ನೀಡಲಾಗುತ್ತಿದೆ. ಇವರುಗಳಿಗೆ

ಸರ್ಕಾರದ ಆದೇಶ ಸಂಖ್ಯೆ . ಮಮಅ/57/ಮಅನಿ/2006, ದಿನಾಂಕ : 07–08–2007 ಪ್ರಕಾರ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ರೂ. 400/–ಗಳಂತೆ ಮಾಶಾಸನವನ್ನು ನೀಡಲಾಗುತ್ತಿದೆ. ಸೆಪ್ಟೆಂಬರ್ 2013 ರಿಂದ ಈ ಮಾಶಾಸನದ ಮೊತ್ತವನ್ನು ರೂ. 500/–ಗಳಿಗೆ ಹೆಚ್ಚಿಸಲಾಗಿದೆ. 2014–15ನೇ ಸಾಲಿನಲ್ಲಿ 28125 ಮಾಜಿ ದೇವದಾಸಿಯರಿಗೆ ಮಾಶಾಸನ ನೀಡಲಾಗುವುದು.

2013–14ನೇ ಸಾಲಿನಲ್ಲಿ ಮಾಜಿ ದೇವದಾಸಿಯರಿಗೆ ಮಾಶಾಸನ ನೀಡಲು ರೂ. 1350 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿತ್ತು. ಈ ಪೈಕಿ ಮೊದಲನೆ, ಎರಡನೇಯ ಹಾಗೂ ಮೂರನೇಯ ಕಂತಿನಲ್ಲಿ ಒಟ್ಟು ರೂ. 1012.50 ಲಕ್ಷಗಳನ್ನು, ಬಿಡುಗಡೆ ಮಾಡಲಾಗಿದೆ. 4ನೇ ಕಂತಿನ ಅನುದಾನ ರೂ. 337.50 ಲಕ್ಷಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿ ಆ ಇಲಾಖೆಯು ಈ ಹಿಂದಿನ ಕಂತುಗಳಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಬಿಡುಗಡೆ ಮಾಡಿದ ನಂತರ 4ನೇ ಕಂತಿನ ಅನುದಾನಕ್ಕಾಗಿ ಕೋರಿಕೆ ಸಲ್ಲಿಸಲು ದಿನಾಂಕ : 27–03–2014 ರಂದು ಸೂಚಿಸಿತ್ತು. 4ನೇ ಕಂತಿನ ಅನುದಾನಕ್ಕಾಗಿ ಪ್ರಸ್ತಾವ ಸಲ್ಲಿಸುವ ವೇಳೆಗೆ 2013–14ನೇ ಸಾಲಿನ ಆರ್ಥಿಕ ವರ್ಷ ಮುಕ್ತಾಯಗೊಂಡ ಕಾರಣ 4ನೇ ಕಂತಿನಲ್ಲಿ ನೀಡಬೇಕಾದ ಅನುದಾನವನ್ನು 2014–15ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಮಾಶಾಸನ ಪಾವತಿಸಲಾಗುತ್ತಿದೆ.

ಮಾಜಿ ದೇವದಾಸಿಯರಿಗೆ ಜನವರಿ 2014 ರಿಂದ ಮಾರ್ಚ್ 2014ರ ವರೆಗೆ ಪಾವತಿಸಬೇಕಾಗಿದ್ದ ಮಾಶಾಸನದ ಮೊತ್ತ ರೂ. 337.50 ಲಕ್ಷಗಳನ್ನು 2014–15ನೇ ಸಾಲಿನಲ್ಲಿ ಒದಗಿಸಿರುವ ರೂ. 1688.00 ಲಕ್ಷಗಳಿಂದ ಭರಿಸಿ ಈ ಸಾಲಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನಕ್ಕಾಗಿ ಪ್ರಸ್ತಾವ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ : ಮಮಅ/21/ಮಅನಿ/2014, ದಿನಾಂಕ : 09–12–2014ರಲ್ಲಿ ನಿರ್ದೇಶನ ನೀಡಲಾಗಿದೆ. ಮಾಜಿ ದೇವದಾಸಿಯರಿಗೆ ವಾಸ್ತವವಾಗಿ 9 ತಿಂಗಳ ಮಾಶಾಸನ ಬಾಕಿ ಇರುವುದಿಲ್ಲ ಜನವರಿ 2014 ರಿಂದ ಮಾರ್ಚ್ 2014ರ ವರೆಗೆ ಬಾಕಿ ಇದ್ದ 3 ತಿಂಗಳ ಮಾಶಾಸನವನ್ನು ಬಿಡುಗಡೆ ಮಾಡಲಾಗಿದೆ. ರಾಜ್ಯ ಹುಜುರ್ ಖಜಾನೆಯಿಂದ ಚೆಕ್ ಸ್ವೀಕರಿಸಿದ ಕೂಡಲೆ ಮಾಜಿ ದೇವದಾಸಿಯರ ಖಾತೆಗೆ ಪಾವತಿಸಲು ಕ್ರಮವಹಿಸಲಾಗುವುದು.

2014–15ನೇ ಸಾಲಿನ 1ನೇ ತ್ರೈಮಾಸಿಕ ಕಂತಿನಲ್ಲಿ ರೂ. 422.00 ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ : ಮಮಅ/21/ಮಅನಿ/2014, ದಿನಾಂಕ : 07–06–2014 ರಂದು ಬಿಡುಗಡೆ ಮಾಡಿದ್ದು ಈಗಾಗಲೇ ಅರ್ಹ ಮಾಜಿ ದೇವದಾಸಿಯರಿಗೆ ಪಾವತಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ : ಮಮಅ/21/ಮಅನಿ/2014, ದಿನಾಂಕ : 05–12–2014ರ ಪ್ರಕಾರ ಈ ಸಾಲಿನ 2ನೇ

ಕಂತಿನ ಅನುದಾನ ರೂ. 422.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು ಖಜಾನೆಯಿಂದ ಚೆಕ್ ಬಂದ ನಂತರ ಮಾಜಿ ದೇವದಾಸಿಯರ ಖಾತೆಗಳಿಗೆ ಜಮಾ ಮಾಡಲಾಗುವುದು.

**ಅಧ್ಯಕ್ಷರು :** ಈಗ ಇದನ್ನು monthly ಕೊಡುವುದಿಲ್ಲವಾ ?

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ, ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು) :** ಮಾನ್ಯ ಅಧ್ಯಕ್ಷರೆ, monthly ಕೊಡುವುದಿಲ್ಲ ಅಧ್ಯಕ್ಷರೆ, ಮಾಸಿಕ ಕೊಡುವುದನ್ನು ತ್ರೈಮಾಸಿಕವಾಗಿ ಒಂದು ಸಾರಿ ರಿಲೀಸ್ ಮಾಡುತ್ತಿದ್ದರು. ಅದರ ಪ್ರಕಾರವಾಗಿ 2013–14ನೇ ಸಾಲಿನಲ್ಲಿ ಮೊದಲನೇ ಕಂತು, ಎರಡನೇ ಕಂತು ಹಾಗೂ ಮೂರನೇ ಕಂತು ಬಿಡುಗಡೆ ಆಗಿತ್ತು. ಕಾರಣಾಂತರದಿಂದ 4ನೇ ಕಂತು ಬಿಡುಗಡೆ ಆಗಿರಲಿಲ್ಲ. ನಾವು ಮತ್ತೆ ಮನವಿ ಮಾಡಿದ್ದೇವೆ. Supplementary budget ನಲ್ಲಿ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ ಬಿಡುಗಡೆ ಮಾಡುತ್ತೇವೆ. ಇದುವರೆಗೂ ಕೊಡಬೇಕಾಗಿದ್ದು ಎಲ್ಲವನ್ನು ನಾವು ರಿಲೀಸ್ ಮಾಡಿದ್ದೇವೆ. ಈ ತಿಂಗಳ ಕೊನೆಯಲ್ಲಿ ಜನವರಿ, ಫೆಬ್ರವರಿ, ಮಾರ್ಚ್‌ದು ಕೂಡ ಬಿಡುಗಡೆ ಮಾಡುತ್ತೇವೆ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಅಧ್ಯಕ್ಷರೆ, 9 ತಿಂಗಳು ಮಾಶಾಸನ ಸಿಕ್ಕಿಲ್ಲ. ಸರ್ಕಾರ ಈ ರೀತಿ ಗುಬ್ಬಿ ಕಾಗೆ ಕಥೆ ಹೇಳಿದ ಹಾಗೆ ಹೇಳಿದರೆ ಹೇಗೆ ? ಇದು ಯಾವ ದೊಡ್ಡ ಕೆಲಸ ಅವರ ಇಲಾಖೆಯ ಕ್ರಿಯಾ ಯೋಜನೆಯಲ್ಲಿ ಹಣ ಇಟ್ಟಿರುತ್ತಾರೆ ಕೊಡುವುದಕ್ಕೆ ಏನು ತೊಂದರೆ ?

**ಶ್ರೀಮತಿ ಉಮಾಶ್ರೀ :** ಈಗ ಯಾವುದೂ ಬಾಕಿ ಇಲ್ಲ ಅಧ್ಯಕ್ಷರೆ, ಎಲ್ಲವನ್ನೂ ಬಿಡುಗಡೆ ಮಾಡಿದ್ದೇವೆ.

**ಶ್ರೀ ವಿ. ಸುನೀಲ್ ಕುಮಾರ್ :** ಮಾನ್ಯ ಅಧ್ಯಕ್ಷರೆ, ಇದನ್ನು ಮಾಶಾಸನ ಎನ್ನುವುದನ್ನು ತೆಗೆದು ವರ್ಷಾಶನ ಎಂದು ಮಾಡಿ ಬಿಡಲಿ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಅಧ್ಯಕ್ಷರೆ, ತಾವು ಸರ್ಕಾರಕ್ಕೆ ನಿರ್ದಿಷ್ಟವಾದ ಡೈರೆಕ್ಷನ್ ಕೊಡಿ. ಅವರಿಗೆ monthly ಕೊಡಲಿ. ಅವರಿಗೆ ಪ್ರತಿ ತಿಂಗಳು ಕೊಡುವುದಕ್ಕೆ ಏನು ತೊಂದರೆ ಇದೆ ?

**ಅಧ್ಯಕ್ಷರು :** ನೀವು ಅದನ್ನು ಕೇಳಲಿಲ್ಲ.

**ಅಧ್ಯಕ್ಷರು :** ಕಾರ್‌ಜೋಳ್‌ರವರೆ, ನೀವು ಕೇಳಿದ್ದು ಹಣ ಬಿಡುಗಡೆಯಾಗಿಲ್ಲದಿರುವ ಬಗ್ಗೆ. ಅವರು ಹಣವನ್ನು ಬಿಡುಗಡೆ ಮಾಡುವುದಕ್ಕೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎನ್ನುವ ಬಗ್ಗೆ ಹೇಳಿದ್ದಾರೆ.

ಶ್ರೀಮತಿ ಉಮಾಶ್ರೀ : ಈಗಾಗಲೇ ಹಣ ಬಿಡುಗಡೆಯಾಗಿದೆ. ಸಂಪೂರ್ಣವಾಗಿ ಹಣ ಬಿಡುಗಡೆಯಾಗಿದೆ. ಮುಂದಿನ ಮೂರು ತಿಂಗಳಿನದ್ದು ಕೂಡ ಬಿಡುಗಡೆ ಮಾಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಹಣ ಬಂದಿಲ್ಲ, ದಯವಿಟ್ಟು ಸರ್ಕಾರಕ್ಕೆ ನಿರ್ದಿಷ್ಟವಾದಂತಹ ಸೂಚನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಉಮಾಶ್ರೀ : ಗೋವಿಂದ ಕಾರಜೋಳ್‌ರವರೆ, ತಮಗೆ ಉತ್ತರ ಕೊಡುತ್ತೇನೆ. ತಮ್ಮ ಆತಂಕ ಮತ್ತು ಕಾಳಜಿ ನನಗೆ ಅರ್ಥವಾಗಿದೆ.

(ಗೊಂದಲ)

ಅಧ್ಯಕ್ಷರು : ಈ ರೀತಿ ಮಾತನಾಡುತ್ತಾ ಹೋದರೆ ಆಗುವುದಿಲ್ಲ. ಗೋವಿಂದ ಕಾರಜೋಳ್‌ರವರೆ ನೀವು ಬೇಕಾದರೆ ಇದನ್ನು ಚರ್ಚೆಗೆ ಬೇರೆ ರೂಪದಲ್ಲಿ ತನ್ನಿ. ಅರವಿಂದ ಚಂದ್ರಕಾಂತ್ ಬೆಲ್ಲದ್‌ರವರೆ, ನೀವು ಪ್ರಸ್ತಾಪ ಮಾಡಿ.

ಶ್ರೀ ಅರವಿಂದ್ ಚಂದ್ರಕಾಂತ್ ಬೆಲ್ಲದ್ : ಮಾನ್ಯ ಅಧ್ಯಕ್ಷರೆ, ಈಗ ಶಾಲಾ ದಾಖಲಾತಿಯೊಳಗೆ ತಂದೆಯ ಹೆಸರು ಅಥವಾ ಹುಡುಗನ ಹೆಸರು ಅಥವಾ ಚಿಕ್ಕಪುಟ್ಟ ಬದಲಾವಣೆ ಮಾಡಬೇಕಾಗಿದ್ದರೂ ಕೂಡ ಅದಕ್ಕೆ ನ್ಯಾಯಾಲಯದ ಡಿಕ್ರಿಯನ್ನು Insist ಮಾಡುತ್ತಿದ್ದಾರೆ. ಇದರಿಂದ ಬಡ ವಿದ್ಯಾರ್ಥಿಗಳಿಗೆ ಸಾವಿರಾರು ರೂಪಾಯಿಗಳನ್ನುಖರ್ಚು ಮಾಡಬೇಕಾಗಿದ್ದು ಇದರಿಂದ ಬಹಳ ತೊಂದರೆಯಾಗುತ್ತಿದೆ ಮತ್ತು ಸಮಯ ಹಿಡಿಯುತ್ತಿದೆ ಇನ್ನು ಮುಂದೆ ಈ ರೀತಿಯಾಗದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮಾನ್ಯ ಅಧ್ಯಕ್ಷರೆ, ನೀವು ಅವರ ಹೆಸರನ್ನು ಕರೆದಾಗ ಅವರು ಇರಲಿಲ್ಲ.

18 ವಿಷಯ : ರಾಜ್ಯ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಗಳ ಹೆಸರು, ತಂದೆಯ ಹೆಸರು ಹಾಗೂ ಅಡ್ಡ ಹೆಸರುಗಳಿಂದ ಸಣ್ಣ ಪುಟ್ಟ ತಿದ್ದುಪಡಿಗೆ ನ್ಯಾಯಾಲಯ ಡಿಕ್ರಿಯನ್ನು ಅನುಷ್ಠಾನ ಮಾಡುತ್ತಿರುವುದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ಅರವಿಂದ್ ಚಂದ್ರಕಾಂತ್ ಬೆಲ್ಲದ್ (ಹು. ಧಾ. ಪಶ್ಚಿಮ) : ರಾಜ್ಯ ಶಾಲಾ ದಾಖಲಾತಿಗಳಲ್ಲಿ ವಿದ್ಯಾರ್ಥಿಗಳ ಹೆಸರು, ತಂದೆಯ ಹೆಸರು ಹಾಗೂ ಅಡ್ಡ ಹೆಸರುಗಳಿಂದ ಸಣ್ಣ ಮಟ್ಟ ತಿದ್ದುಪಡಿಗೆ ನ್ಯಾಯಾಲಯ ಡಿಕ್ರಿಯನ್ನು ಅನುಷ್ಠಾನ ಮಾಡುತ್ತಿರುವುದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರ ಗಮನ ಸೆಳೆಯುತ್ತೇನೆ.